ನಿಂತುಕೊಂಡೇ ಒಂದೆರಡು ನಿಲ್ದಾಣಗಳವರೆಗೆ ಸಂಚರಿಸುವವರು, ಅದರಲ್ಲೂ ಯುವಕ-ಯುವತಿಯರು ತಮ್ಮ ಸಲಹೆ ನೀಡಿದರು. "ಹಾಗಿದ್ದರೆ ಹೇಳಿಬಿಡಲಿ ಕವಿತೆ... ನಮ್ಮ ಹೃದಯವೂ ತಂಪಾಗಲಿ... ನಾವೂ ಸಂಭ್ರಮಿಸುತ್ತೇವೆ."

ಮೇಲಿನ ಬರ್ತ್‌ನಲ್ಲಿ ಮಲಗಿಕೊಂಡಿದ್ದ ವ್ಯಕ್ತಿಯು ಚೆನ್ನೈನವನಾಗಿದ್ದ. ನಾನು ನನ್ನ ಪುಸ್ತಕದ ಹೆಸರನ್ನು ಹಿಂದಿಯಲ್ಲಿ ಹೇಳಿದ್ದೆ. ಅದು ಅವನಿಗೆ ಅರ್ಥವಾಗಿರಲಿಲ್ಲ. ಹಾಗಾಗಿ ನನ್ನ ಕಡೆಗೆ ಮುಖ ತಿರುಗಿಸಿದ ಆತ ಅದರ ಹೆಸರನ್ನು ಇಂಗ್ಲೀಷ್‌ನಲ್ಲಿ ಅನುವಾದಿಸಿ ಹೇಳುವಂತೆ ಕೇಳಿಕೊಂಡ. ನಾನು ಹೇಳಿದೆ. ಮರುಕ್ಷಣವೇ ಆತ ತನ್ನ ಪಾಡಿಗೆ ತಾನು ಮತ್ತೆ ಮಲಗಿಕೊಂಡ. ಆತನ ವರ್ತನೆಯನ್ನು ನೋಡಿ ನನ್ನ ಪಕ್ಕದಲ್ಲಿ ಕುಳಿತಿದ್ದ ಮಹಾನುಭಾವನಿಗೆ ಇನ್ನಿಲ್ಲದ ಕೋಪ ಬಂದಿತು. ಆತ ಜೋರಾದ ಧ್ವನಿಯಲ್ಲಿ ಹೇಳಿದ, "ನೀವೂ ಚೆನ್ನಾಗಿದ್ದೀರಿ... ನೀವು ಮಹಾನ್ ಕವಿಯೊಬ್ಬರನ್ನು ಅವಮಾನಿಸುತ್ತಿದ್ದೀರಿ."

ನಾನು ಇದರ ಬಗ್ಗೆ ಏನಾದರೂ ಪ್ರತಿಕ್ರಿಯಿಸಬೇಕು ಎನ್ನುವಷ್ಟರಲ್ಲಿಯೇ ಕಂಪಾರ್ಟ್ಮೆಂಟ್‌ನಲ್ಲಿ ಭಾಷೆ, ಪ್ರಾಂತ್ಯ, ಜಾತಿ, ಸಭ್ಯತೆ, ಸಂಸ್ಕೃತಿ ಇತ್ಯಾದಿಗಳ ಹೆಸರಿನಲ್ಲಿ ದೊಡ್ಡದೊಂದು 'ಯುದ್ಧ'ದ ತಯಾರಿಯೇ ನಡೆದುಹೋಯಿತು. ಒಂದು ವೇಳೆ ಬಂಗಾಳಿ ಮಹಿಳೆ ಮಧ್ಯಪ್ರವೇಶ ಮಾಡದೇ ಹೋಗಿದ್ದಿದ್ದರೆ, ಅಲ್ಲಿದ್ದವರ ಪೈಕಿ ಯಾರದಾದರೂ ತಲೆ 'ಅಖಂಡ'ವಾಗಿ ಉಳಿಯುತ್ತಿರಲಿಲ್ಲ. ಆಕೆ ನನ್ನ 'ಮಿತ್ರ'ನಿಗೆ ಹೇಳಿದಳು, "ನಮ್ಮ ದೇಶದಲ್ಲಿ ಮಾತ್ರವಲ್ಲ, ಜಗತ್ತಿನಲ್ಲಿ ಇರುವ ಎಲ್ಲಾ ಭಾಷೆಗಳೂ ಒಳ್ಳೆಯ ಹಾಗೂ ಶ್ರೇಷ್ಠ ಭಾಷೆಗಳೇ. ಎಲ್ಲ ಭಾಷೆಯನ್ನೂ ನಾವು ಪ್ರೀತಿಸಬೇಕು. ಅನಾವಶ್ಯಕ ಜಗಳ ಮಾಡಿಕೊಳ್ಳುವುದರಿಂದ ಏನು ಪ್ರಯೋಜನ?"

ತಕ್ಷಣವೇ ನನ್ನ 'ಮಿತ್ರ ಮಹಾಶಯ' ತಣ್ಣಗಾದ. ಬಹುಶಃ ಆತನಿಗೆ ಬಂಗಾಳಿಯ ಕೆಲವು ಪದಗಳು ಅರ್ಥವಾಗುತ್ತಿದ್ದವು ಎನ್ನಿಸುತ್ತದೆ. ಆತ ಆಕೆಯ ಮಾತುಗಳಿಗೆ ತನ್ನ ಸಹಮತಿಯನ್ನು ಸೂಚಿಸಿದ.

ಕೆಲವೇ ನಿಮಿಷಗಳಲ್ಲಿ ಕೊಡರ್ಮಾ ನಿಲ್ದಾಣ ಬಂದಿತ್ತು. ಎದುರಿನಲ್ಲಿ ಕುಳಿತಿದ್ದ ಬಂಗಾಳಿ ಮಹಿಳೆ ತನ್ನ ಗಂಡ ಮತ್ತು ಮಗಳ ಜೊತೆಯಲ್ಲಿ ಇಳಿದುಹೋದಳು. ಹೋಗುವಾಗ ಆಕೆ ಹೇಳಿದ ಮಾತು, "ಈ ಕಂಪಾರ್ಟ್ಮೆಂಟ್ ಸುರಕ್ಷಿತ ಎನ್ನಿಸುತ್ತಿಲ್ಲ."

ನಮ್ಮ ಕಂಪಾರ್ಟ್ಮೆಂಟ್‌ಗೆ ಹೊಸ ಪ್ರಯಾಣಿಕರು ಬಂದರು. ಕೂಡಲೇ ನನ್ನ 'ಮಿತ್ರ ಮಹಾಶಯ' ಅವರಿಗೆ ನನ್ನ ತೋರಿಸುತ್ತ ಕೇಳಿದ, 'ಇವರು ನಿಮಗೆ ಗೊತ್ತಿಲ್ಲವೇನು? ಪರಿಚಯ ಮಾಡಿಕೊಳ್ಳಿ... ಇವರು..."

ಆತನ ವರ್ತನೆಯಿಂದ ನನಗೆ ಸಂಕೋಚವುಂಟಾಯಿತು. ನಾನು ಆತನನ್ನು ತಡೆಯುತ್ತ ಪ್ರಶ್ನಿಸಿದೆ, "ಇದೇನು ನೀವು ಮಾಡುತ್ತಿರುವುದು?"

ಆತ ಎರಡೂ ಕೈಗಳನ್ನು ಜೋಡಿಸಿ, ಗೌರವಪೂರ್ವಕವಾಗಿ ಕೈಮುಗಿಯುತ್ತ ಹೇಳಿದ, "ನಾನು ನನ್ನ ಕರ್ತವ್ಯವನ್ನು ಮಾಡುತ್ತಿದ್ದೇನೆ. ನಾನು ನಿಮ್ಮ ಸೇವೆ ಮಾಡುತ್ತಿಲ್ಲ; ನಿಮ್ಮ ಸಾಹಿತ್ಯದ ಸೇವೆ ಮಾಡುತ್ತಿದ್ದೇನೆ. ದಯವಿಟ್ಟು ತಾವು ಸುಮ್ಮನಿರಿ. ಸರಿ... ಊಟ ಮಾಡುವಿರೇನು? ಇಲ್ಲಿನ ಹೋಟೆಲ್‌ನಲ್ಲಿ ತುಂಬಾ ಒಳ್ಳೆಯ ಊಟ ಕೊಡುತ್ತಾರೆ..."

ನಾನು 'ಬೇಡ'ವೆಂದು ಹೇಳುತ್ತಿರುವಾಗಲೇ ಆತ ಶರವೇಗದಲ್ಲಿ ಅಲ್ಲಿಂದ ನಿರ್ಗಮಿಸಿದ್ದ ಮತ್ತು ಕೆಲವೇ ನಿಮಿಷಗಳಲ್ಲಿ ಎರಡು ಕಾಗದದ ತಟ್ಟೆಗಳಲ್ಲಿ ಪಲಾವ್ ತೆಗೆದುಕೊಂಡು ಬಂದಿದ್ದ. ಊಟ ಮಾಡುವ ಸಂದರ್ಭದಲ್ಲಿ ಆತನಿಗೆ ಮತ್ತೆ ಅಮರ್ ಸಿಂಗ್‌ರವರ ನೆನಪಾಗಿತ್ತು. ಬಾಯಿಗೆ ಹಾಕಿಕೊಂಡಿದ್ದ ಪಲಾವನ್ನು ಜಗಿಯುತ್ತಲೇ ಆತ ಹೇಳಿದ, "ಅಮರ್ ಸಿಂಗ್ ಯಾವಾಗಲೂ ಹೇಳುತ್ತಿರುತ್ತಾರೆ, ಒಂದು ವೇಳೆ ನಿಮ್ಮ 'ಲಾಲ್ ಸಾಂಪ್' ಕೃತಿಯು ಇಂಗ್ಲೀಷ್‌ಗೆ ಅನುವಾದಗೊಂಡರೆ ಪ್ರತಿಷ್ಠಿತ 'ನೊಬೆಲ್ ಪುರಸ್ಕಾರ' ಸಿಗಬಹುದು ಎಂದು. ನೀವ್ಯಾಕೆ ಅದನ್ನು ಇಂಗ್ಲೀಷ್‌ಗೆ ಅನುವಾದ ಮಾಡಿಸಿಲ್ಲ? ರಾಷ್ಟ್ರಮಟ್ಟದಲ್ಲಿಯೂ ಈಗೀಗ ದೊಡ್ಡ ಪ್ರಶಸ್ತಿಗಳನ್ನು ಕೊಡಲಾಗುತ್ತಿದೆ..."

ನಾನು ಏನಾದರೂ ಉತ್ತರ ನೀಡುವುದಕ್ಕಿಂತ ಮೊದಲೇ ಆತ ನೀರಿನ ಬಾಟಲ್ ತರುವುದಾಗಿ ಹೇಳಿ ಕೆಳಕ್ಕಿಳಿದುಹೋಗಿದ್ದ. ಅಲ್ಲಿಂದ ಬರುವಾಗ ಒಂದಿಬ್ಬರು ಗಾರ್ಡ್ಗಳನ್ನೂ ಜೊತೆಯಲ್ಲಿ ಕರೆತಂದಿದ್ದ. ಈತನೇನು ಮಾಡುತ್ತಿದ್ದಾನೆ ಎಂದು ಗಾಬರಿಯಾಯಿತು. ಆದರೆ ಆತ ಬಾಗಿಲಿನಲ್ಲಿಯೇ ನಿಂತುಕೊಂಡು, ಅವರಿಬ್ಬರಿಗೂ ನನ್ನನ್ನು ತೋರಿಸುತ್ತ ಹೇಳತೊಡಗಿದ್ದ, "ನೋಡಿ, 'ಕೆಂಪು ಹಾವು'ನಂತಹ ಪ್ರಸಿದ್ಧ ಕೃತಿಯನ್ನು ರಚಿಸಿದ ಮಹಾನ್ ಕವಿ ಶ್ರೀ ನಂದಾಕಿಶೋರ ಇವರೇ